ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 3 ವಿಧಾನಸಭೆ ಸದಸ್ಯರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE: 11/4/21

# ಪಕ್ಷದಿಂದ ಉಚ್ಚಾಟಿಸಲು ಯಾರಿಂದಲೂ ಸಾಧ್ಯವಿಲ್ಲ

## ಶಾಸಕರ ಭಾವನೆ ತಿಳಿಯದಿದ್ದರೆ ಉಸ್ತುವಾರಿ ಇದ್ದು ಪ್ರಯೋಜನವಿಲ್ಲ ಎಂದ ಯತ್ನಾಳ್

■ **ವಿಕ ಸುದ್ದಿಲೋಕ** ಧಾರವಾಡ

'ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ವಿಜಯೇಂದ್ರ ಮೇಲೆ ಉಸ್ತುವಾರಿ ಅರುಣ್ ಸಿಂಗ್ ಅವರಿಗೆ ಇರುವ ಪ್ರೀತಿ ಏನು ಎಂಬುದು ತಿಳಿಯದು. ಅದು ಆ ಮಹಾಲಕ್ಷ್ಮಿ ತಾಯಿ ಧನಲಕ್ಷ್ಮೀಗೆ ಗೊತ್ತು' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ "ಜನರು ನಾಯಕತ್ವ ನೀಡುತ್ತಾರೆಯೇ ಹೊರತು, ಸಿಂಗ್ ಅಲ್ಲ, ಶಾಸಕರ ಭಾವನೆ ತಿಳಿದುಕೊಳ್ಳದಿದ್ದರೆ ಅವರು ಉಸ್ತುವಾರಿ ಆಗಿ ಏನು ಪ್ರಯೋಜನ" ಎಂದು ಕಿಡಿಕಾರಿದರು.

"ಧೃತರಾಷ್ಟ್ರನ ರೀತಿಯಲ್ಲಿ ಮಗನನ್ನು ಪಟ್ಟಕ್ಕೇರಿಸಲು ಹೊರಟಿರುವ ಯಡಿಯೂರಪ್ಪ ರಾಜಕಾರಣ ಕೊನೆಯಾಗಲಿದೆ. ಸಿಎಂ ಸ್ಥಾನದ ಪಟ್ಟಿಯಲ್ಲಿ ಇಲ್ಲ, ಪಕ್ಷದ ನಿರ್ಣಯ ಹೇಳಲಾಗದು. ಮೇ 2ರ ಹೊತ್ತಿಗೆ ಅದು ಗೊತ್ತಾಗಲಿದೆ," ಎಂದು ಹೇಳಿದ್ದಾರೆ.

"ರಾಜ್ಯ ಬಿಜೆಪಿಯಲ್ಲಿ ನಾಯಕತ್ವ ಬದಲಾವಣೆ ಚರ್ಚೆ ನಡೆಯುತ್ತಿದೆ. ಭ್ರಷ್ಟಾಚಾರ ಮತ್ತು ಕುಟುಂಬ ರಾಜಕಾರಣದಿಂದ ಬಿಜೆಪಿ ಬಹುತೇಕ ಶಾಸಕರಿಗೆ ಸಮಾಧಾನ ಇಲ್ಲ, ಶಾಸಕರ ಕೆಲಸ ಆಗುತ್ತಿಲ್ಲ, ಶಾಸಕಾಂಗ ಪಕ್ಷದ ಸಭೆಯನ್ನೂ ಕರೆಯುತ್ತಿಲ್ಲ, ಏಕೆಂದರೆ ಯಡಿಯೂರಪ್ಪ ಅವರಿಗೆ ಭಯ ಇದೆ" ಎಂದರು.



**ಉಚ್ಚಾಟಿಸಲು ಸಾಧ್ಯವಿಲ್ಲ:** ಯಡಿಯೂರಪ್ಪ ಕುಟುಂಬ ರಾಜಕಾರಣ ಹಾಗೂ ಭ್ರಷ್ಟಾಚಾರ ಕುರಿತು ಪ್ರಧಾನಮಂತ್ರಿಗೂ ಪತ್ರ ಬರೆದು ಗಮನಕ್ಕೆ ತಂದಿದ್ದೇನೆ. ಸತ್ಯವನ್ನೇ ಮಾತನಾಡುವ ನನ್ನನ್ನು ಪಕ್ಷದಿಂದ ಹೊರ ಹಾಕಲು ಹೇಗೆ ಸಾಧ್ಯ? ಹೀಗಾಗಿ ಯಾರಿಂದಲೂ ನನ್ನನ್ನು ಪಕ್ಷದಿಂದ ಹೊರ ಹಾಕಲು ಸಾಧ್ಯವಿಲ್ಲ" ಎಂದು ತಿರುಗೇಟು ನೀಡಿದರು.

"ಭ್ರಷ್ಟಾಚಾರ ಹಾಗೂ ಕುಟುಂಬ ರಾಜಕಾರಣದ ಬಗ್ಗೆ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ. ರವಿ, ಸಚಿವ ಕೆ.ಎಸ್. ಈಶ್ವರಪ್ಪ ವಿರೋಧ ವ್ಯಕ್ತಪಡಿಸಿದ್ದಾರೆ. ಮುಂದೆ ಇನ್ನೂ ಅನೇಕ ಮುಖಂಡರು ಧ್ವನಿ ಎತ್ತಲಿದ್ದಾರೆ" ಎಂದು ಪುನರುಚ್ಚರಿಸಿದರು.

**ಕೈಬಿಡರು:** ಭ್ರಷ್ಟಾಚಾರ ಮತ್ತು ಕುಟುಂಬ ರಾಜಕಾರಣದ ಬಗ್ಗೆ ಯತ್ನಾಳ್ ಮಾತನಾಡುತ್ತಿದ್ದಾರೆ. ಈ ಬಗ್ಗೆ ಅರುಣ್ ಸಿಂಗ್ ಅವರಿಗೂ ಗೊತ್ತಿದೆ. ಪ್ರಧಾನಿ ಹಾಗೂ ಅಮಿತ್ ಶಾ ಅವರ ಹೃದಯದಲ್ಲೂ ಯತ್ನಾಳ ಬಗ್ಗೆ ಅಭಿಮಾನವಿದ್ದು ಎಂದಿಗೂ ಇವರನ್ನು ಕೈಬಿಡುವುದಿಲ್ಲ" ಎಂದು ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

"ಲಿಂಗಾಯತರು ಅಂದರೆ ಶೆಟ್ಟರ್, ಯಡಿಯೂರಪ್ಪ ಎಂಬ ಅರಿಕೆ ಇತ್ತು. ಆದರೆ ಈಗ ಅರಿವಾಗುತ್ತಿದೆ. ಅರುಣ್ ಸಿಂಗ್ ಅವರಿಗೆ ಆಗಿರುವ ತಪ್ಪು ತಿಳಿವಳಿಕೆ ಸರಿಪಡಿಸುವ ಪ್ರಯತ್ನ ಮಾಡಲಾಗುವುದು" ಎಂದರು.